**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 32 ಗ್ರಾಪಂಸಿ 2014

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:25-10-2014

**ಇವರಿಂದ:**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

**ಇವರಿಗೆ:**
ಎಲ್ಲಾ ಜಿಲ್ಲಾ ಪಂಚಾಯತಿಯ
ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು,

ಮಾನ್ಯರೆ,

ವಿಷಯ: ಗ್ರಾಮ ಪಂಚಾಯಿತಿಗಳ ಸಿಬ್ಬಂದಿ ವರ್ಗದ ಮಾದರಿ (ಸ್ಟ್ಯಾಫಿಂಗ್ ಪ್ಯಾಟ್ರನ್) ಹಾಗೂ ಸಿಬ್ಬಂದಿಗಳ ನೇಮಕಾತಿ ವಿಧಾನದ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/22/ಗ್ರಾ.ಪಂ.ಸಿ/2014, ದಿನಾಂಕ: 10.09.2014.
2. ಸರ್ಕಾರದ ತಿದ್ದೋಲೆ ಸಂಖ್ಯೆ: ಗ್ರಾಅಪ 22 ಗ್ರಾಪಂಸಿ 2014 ದಿನಾಂಕ:20-09-2014
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತಿ ರಾಯಚೂರು ರವರ ಪತ್ರ ಸಂಖ್ಯೆ: ಜಿಪಂರಾ/ಆಶಾ.ಉ.ಕಾ-2/ಗ್ರಾ.ಪಂ.ಸಿಬ್ಬಂದಿ-ಅನುಮೋದನೆ/2014-15.

ಉಲ್ಲೇಖ (1) ಮತ್ತು (2) ರ ಸರ್ಕಾರದ ಆದೇಶ ಮತ್ತು ತಿದ್ದೋಲೆಗಳಲ್ಲಿ ಗ್ರಾಮ ಪಂಚಾಯಿತಿಗಳ ಸಿಬ್ಬಂದಿ ವರ್ಗದ ಮಾದರಿ (ಸ್ಟ್ಯಾಫಿಂಗ್ ಪ್ಯಾಟ್ರನ್) ಹಾಗೂ ಸಿಬ್ಬಂದಿಗಳ ನೇಮಕಾತಿ ವಿಧಾನದ ಬಗ್ಗೆ ಸವಿವರವಾಗಿ ತಿಳಿಸಿದೆ. ಆದಾಗ್ಯೂ ಕೆಲವು ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಗ್ರಾಮ ಪಂಚಾಯತಿ ಸಿಬ್ಬಂದಿಗಳ ನೇಮಕಾತಿ ಮತ್ತು ಅನುಮೋದನೆ ನೀಡುವ ಬಗ್ಗೆ ಈ ಕೆಳಕಂಡ ಅಂಶಗಳ ಬಗ್ಗೆ ಸ್ಪಷ್ಟೀಕರಣವನ್ನು ಕೋರಿರುತ್ತಾರೆ.

ಆದುದರಿಂದ ಈ ಕೆಳಕಂಡಂತೆ ತಮಗೆ ಸ್ಪಷ್ಟೀಕರಣ ನೀಡಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

| ಕ್ರ.ಸಂ. | ವಿಷಯ | ಸ್ಪಷ್ಟೀಕರಣ |
|---|---|---|
| 1 | ಡಾಟಾ ಎಂಟ್ರಿ ಆಪರೇಟರ್‌ಗಳ ಸೇವೆಯನ್ನು ಅನುಮೋದನೆಗಾಗಿ ಪರಿಗಣಿಸುವ ಬಗ್ಗೆ.<br><br>1) ಗುಮಾಸ್ತ/ಬೆರಳಚ್ಚುಗಾರರು ಕೆಲಸ ನಿರ್ವಹಿಸುವ ಗ್ರಾಮ ಪಂಚಾಯತಿಗಳಲ್ಲಿ ಡಾಟಾ ಎಂಟ್ರಿ ಆಪರೇಟರ್‌ಗಳ ಸೇವೆಯನ್ನು ಪರಿಗಣಿಸಬಹುದೇ ? | 1) ಇಲ್ಲ. ಈಗ ಕಾರ್ಯನಿರ್ವಹಿಸುತ್ತಿರುವ ಗುಮಾಸ್ತ ಕಂ ಬೆರಳಚ್ಚುಗಾರರನ್ನು ಸೇವೆಯಿಂದ ಮುಕ್ತಿ ಮಾಡಲು ಯಾವುದೇ ಅವಕಾಶವಿರುವುದಿಲ್ಲ. |

| | | |
|---|---|---|
| | 2) ಗುಮಾಸ್ತ / ಬೆರಳಚ್ಚುಗಾರರು ಇಲ್ಲದ ಕಡೆ ಡಾಟಾ ಎಂಟ್ರಿ ಆಪರೇಟರ್‌ಗಳ ನೇಮಕಾತಿಗಾಗಿ ಗ್ರಾಮ ಪಂಚಾಯತಿಗಳ ಸಾಮಾನ್ಯ ಸಭೆಯಲ್ಲಿ ಈಗ ಠರಾವಿನ ಮೂಲಕ ನಿರ್ಣಯಿಸಲು ಗ್ರಾಮ ಪಂಚಾಯತಿಗಳಿಗೆ ನಿರ್ದೇಶನ ನೀಡಬಹುದೇ? | 2) ಗ್ರಾಮ ಪಂಚಾಯತಿಗಳಲ್ಲಿ ಗುಮಾಸ್ತ ಕಂ ಬೆರಳಚ್ಚುಗಾರರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರು ಬಡ್ತಿ/ನಿವೃತ್ತಿ/ಮತ್ತಿತರೆ ಕಾರಣಗಳಿಂದ ಕರ್ತವ್ಯದಿಂದ ಮುಕ್ತಿಗೊಂಡಾಗ ಮಾತ್ರ (ಖಾಲಿ ಇದ್ದಾಗ) ಗುಮಾಸ್ತ ಕಂ ಡಾಟಾ ಎಂಟ್ರಿ ಆಪರೇಟ್‌ಗಳನ್ನು ಸಾಮಾನ್ಯ ಸಭೆ ನಿರ್ಣಯದ ಮೂಲಕ ನೇಮಿಸಿಕೊಳ್ಳಲು ಅವಕಾಶವಿರುತ್ತದೆ |
| 2 | ಗ್ರಾಮ ಪಂಚಾಯತಿ ಆದಾಯ ಶೇ. 40ರಷ್ಟು ಮಿತಿಗಿಂತ ಕಡಿಮೆ ಇದ್ದ ಪಕ್ಷದಲ್ಲಿ, ಗ್ರಾಮ ಪಂಚಾಯತಿಯ ಐದು ಹುದ್ದೆಗಳಲ್ಲಿ ಯಾವುದಕ್ಕೆ ಮೊದಲು ಆದ್ಯತೆ ನೀಡಬೇಕು. | 1. ಕರವಸೂಲಿಗಾರ<br>2. ನೀರು ಸರಬರಾಜುದಾರ<br>3. ಸ್ವಚ್ಛತಾಗಾರರು<br>4. ಗುಮಾಸ್ತ ಕಂ ಬೆರಳಚ್ಚುಗಾರ (ಡಾಟಾ ಎಂಟ್ರಿ ಆಪರೇಟರ್)<br>5. ಜವಾನ<br>ಮೇಲೆ ತಿಳಿಸಿದಂತೆ ಆದ್ಯತೆಯ ಮೇಲೆ ನೇಮಕಾತಿ ಮಾಡಿಕೊಳ್ಳಬೇಕು. |
| 3 | ಒಂದಕ್ಕಿಂತ ಹೆಚ್ಚಿಗೆ ನೀರುಗಂಟಿಗಳು ಇದ್ದಾಗ ಅನುದಾನ ಕಡಿಮೆ ಆದ ಪಕ್ಷದಲ್ಲಿ ಯಾವ ರೀತಿ ಅನುಸರಿಸಬೇಕು ಯಾವ ರೀತಿ ವೇತನ ಪಾವತಿಸಬೇಕು ಅಥವಾ ಅವರುಗಳನ್ನು ಗ್ರಾಮ ಪಂಚಾಯತಿಗಳಲ್ಲಿ ಮುಂದುವರೆಸುವ ಬಗ್ಗೆ ಅಥವಾ ಬೇಡವೇ ಮುಂದುವರೆಸಿದ್ದಲ್ಲಿ ಯಾವ ಅನುದಾನದಲ್ಲಿ ವೇತನ ಪಾವತಿಸಬೇಕು ಉಳಿದ ನೀರುಗಂಟಿಗಳನ್ನು ತೆಗೆಯಬೇಕೇ ಅಥವಾ ಮುಂದುವರೆಸಬೇಕೇ ? | ಗ್ರಾಮ ಪಂಚಾಯತಿಗಳು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 112 ಮತ್ತು 113 ಕ್ಕೆ ಒಳಪಟ್ಟು ಅಗತ್ಯವಿರುವ ಸಿಬ್ಬಂದಿಗಳನ್ನು ನೇಮಕಾತಿ ಮಾಡಲು ಅವಕಾಶವಿರುತ್ತದೆ. ಗ್ರಾಮ ಪಂಚಾಯತಿಯ ಸಿಬ್ಬಂದಿ ವಾರ್ಷಿಕ ವೆಚ್ಚ ಶೇಕಡಾ 40 ನ್ನು ಮೀರಬಾರದು. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಗ್ರಾಅಪ 67 ಗ್ರಾಪಂಸಿ 2006, ದಿನಾಂಕ: 4.01.2008ರಲ್ಲಿ, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳು ಪ್ರತ್ಯೇಕವಾದ ನಳ ನೀರಿನ ಸ್ಥಾವರಗಳನ್ನು ಹೊಂದಿದ್ದರೆ ಅಗತ್ಯಕ್ಕೆ ತಕ್ಕಂತೆ ವಾಟರ್‌ಮನ್‌ಗಳನ್ನು ನೇಮಿಸಿಕೊಳ್ಳಲು ಅವಕಾಶವಿರುತ್ತದೆ (ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 22 ಗ್ರಾಪಂಸಿ 2014ರ ಕಂಡಿಕೆ 10).<br><br>ಗ್ರಾಮ ಪಂಚಾಯತಿಯ ಸಿಬ್ಬಂದಿ ವೆಚ್ಚ ಶೇ 40% ರಷ್ಟುನ್ನು ಮೀರುವುದಾದರೆ ಅಂತಹ ನೇಮಕಾತಿಗಳನ್ನು ತಿರಸ್ಕರಿಸಬೇಕಾಗಿದೆ. |
| 4 | ಈಗಾಗಲೇ ಗ್ರಾಮ ಪಂಚಾಯತಿಗಳಲ್ಲಿ ಡಾಟಾ ಎಂಟ್ರಿ ಆಪರೇಟರ್‌ಗಳು ಕೆಲಸ ನಿರ್ವಹಿಸುತ್ತಿದ್ದು ಇವರ ಸೇವೆಯನ್ನು ಪರಿಗಣಿಸಬೇಕೇ? ಅಥವಾ ಬೇಡವೇ? | ಈಗಾಗಲೇ ಗ್ರಾಮ ಪಂಚಾಯತಿಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವವರಿಗೆ ಮೊದಲ ಆದ್ಯತೆ ನೀಡಿ ಗ್ರಾಮ ಪಂಚಾಯತಿಗಳಲ್ಲಿ ಗುಮಾಸ್ತ / ಬೆರಳಚ್ಚುಗಾರ (ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ಮರು ಪದನಾಮೀಕರಣ) ಹುದ್ದೆ ಖಾಲಿ ಇದ್ದಲ್ಲಿ ಗ್ರಾಮ ಪಂಚಾಯತಿ ಸಾಮಾನ್ಯ ಸಭೆ ನಿರ್ಣಯದ ಮೇರೆಗೆ ನೇಮಿಸಿಕೊಳ್ಳಬಹುದಾಗಿದೆ. |
| 5 | ಒಂದೇ ಹುದ್ದೆಗಳಿದ್ದಾಗ ಮೀಸಲಾತಿ ಅನ್ವಯಿಸದೆ ಇರುವುದರಿಂದ ತಕರಾರು ಬಂದಲ್ಲಿ ಯಾವ ರೀತಿ ಕ್ರಮ ವಹಿಸಬೇಕು? | ಮೀಸಲಾತಿ ನಿಯಮದನ್ವಯ ನೇಮಕಾತಿ ವೃಂದದಲ್ಲಿ ಒಂದೇ ಹುದ್ದೆ ಇದ್ದಲ್ಲಿ, ಮೀಸಲಾತಿಯ ಆವರ್ತಬಿಂದು (ರೋಸ್ಟರ್ ಪಾಯಿಂಟ್) ಅನ್ವಯಿಸುವುದಿಲ್ಲ. |

| | | |
|---|---|---|
| 6 | ವಿದ್ಯಾರ್ಹತೆ ಬಗ್ಗೆ<br><br>**1) ನೀರುಗಂಟಿ /ಜವಾನರು:-** ಸರ್ಕಾರದ ಇತ್ತೀಚಿನ ಆದೇಶದಂತೆ ಎಸ್.ಎಸ್.ಎಲ್.ಸಿ. ಪಾಸಾಗದೆ ಇರುವ ಹಾಗೂ ಈಗಾಗಲೇ ಜಿಲ್ಲಾ ಪಂಚಾಯತಿಯಿಂದ ಪೂರ್ವಾನುಮೋದನೆಯಾದ ನೀರುಗಂಟಿಗಳನ್ನು ಮುಂದುವರೆಸಬೇಕೇ? ಅಥವಾ ಬೇಡವೇ?<br>**2) ಕರವಸೂಲಿಗಾರ:-** ಸರ್ಕಾರದ ಇತ್ತೀಚಿನ ಆದೇಶದಂತೆ ಪಿ.ಯು.ಸಿ. ಪಾಸಾಗಿರಬೇಕು ಆದರೆ ಈಗಾಗಲೇ ಸರ್ಕಾರದ ಹಿಂದಿನ ಆದೇಶದಂತೆ ಎಸ್.ಎಸ್.ಎಲ್.ಸಿ. ಪಾಸಾಗಿದ್ದು, ಜಿಲ್ಲಾ ಪಂಚಾಯತಿಯಿಂದ ಪೂರ್ವಾನು ಮೋದನೆಯಾಗಿದ್ದರೆ ಅವರನ್ನು ಸರ್ಕಾರದ ಇತ್ತೀಚಿನ ಆದೇಶದಂತೆ ಯಾವ ರೀತಿ ಕ್ರಮ ಕೈಗೊಳ್ಳಬೇಕು. | ಸರ್ಕಾರವು ದಿನಾಂಕ:10-01-1994 ಮತ್ತು 04-01-2008 ರ ಸರ್ಕಾರದ ಆದೇಶ ಮತ್ತು ಅಧಿಕೃತ ಜ್ಞಾಪನದಲ್ಲಿ ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗದ ಮಾದರಿ ಮತ್ತು ನೇಮಕಾತಿ ವಿಧಾನದ ಬಗ್ಗೆ ವಿವರಿಸಲಾಗಿದ್ದು, ಆಗ ನಿಗದಿಪಡಿಸಿರುವ ವಿದ್ಯಾರ್ಹತೆ ಅನುಗುಣವಾಗಿ ಗ್ರಾಮ ಪಂಚಾಯತಿಯು ನೌಕರರನ್ನು ನೇಮಕ ಮಾಡಿಕೊಳ್ಳಬೇಕಾಗಿರುತ್ತದೆ.<br><br>ಪ್ರಸ್ತುತ ಸರ್ಕಾರವು ದಿನಾಂಕ: 10-09-2014 ರಂದು ಹೊರಡಿಸಿರುವ ಆದೇಶವು ಭವಿಷ್ಯಾನ್ವಯವಾಗಿದ್ದು, ಈ ಹಿಂದಿನ ಆದೇಶ / ಅಧಿಕೃತ ಜ್ಞಾಪನಗಳನ್ವಯ ನೇಮಕಗೊಂಡಿರುವ ಸಿಬ್ಬಂದಿ ವರ್ಗದವರಿಗೆ ಈಗ ನಿಗಧಿಗೊಳಿಸಿರುವ ವಿದ್ಯಾರ್ಹತೆ ಅನ್ವಯಿಸುವುದಿಲ್ಲ.<br>ಆಯಾಯ ಆದೇಶಗಳಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆ ಆ ಸಂದರ್ಭದಲ್ಲಿ ನೇಮಿಸಿಕೊಂಡ ನೌಕರರಿಗೆ ಮಾತ್ರ ಅನ್ವಯಿಸುತ್ತದೆ. |

ತಮ್ಮ ವಿಶ್ವಾಸಿ

(ಕೆ. ಯಾಲಕ್ಕಿಗೌಡ)

ನಿರ್ದೇಶಕರು (ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.